Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 40] ಮಂಗಳವಾರ 18—11—47 [ಬಿಡಿ ಪ್ರತಿ 3 ಪೈ

ಕಾಂಗ್ರೆಸಿಗರ ಮಹಾ ಕೂಟ

[ವರದಿಕಾರ ' ಕಂಠಿ ' ವರದಿ]

ಚಿತ್ರದುರ್ಗ, ನ 15

ಮೊಟ್ಟ ಮೊದಲನೆ ವಿಜಯ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಈ ಮಧ್ಯಾಹ್ನ 2 ಗಂಟೆನಂತರ ಇಲ್ಲಿನ ಅದ್ಭುತ ಪೆಂಡಾಲಿನಲ್ಲಿ ನೆರೆದಿದೆ. ಪಾಮಡಿಯವರನ್ನು ಬಿಟ್ಟು ಮಿಕ್ಕೆಲ್ಲ ಸಚಿವರೂ ಬಂದಿದ್ದಾರೆ.

ಜನ ! ಜನ !

ಇದಕ್ಕಾಗಿ ಕನ್ನಡ ನಾಡಿನ ಮೂಲೆ ಮೂಲೆಗಳಿಂದ ಸುಮಾರು ಒಂದು ಲಕ್ಷ ಮಂದಿ ನರೆಗೆ ಜನ ಬಂದು ಜಮಾಯಿಸಿ ಬಿಟ್ಟಿದ್ದಾರೆ.

ಊಟ – ತಿಂಡಿ

ಸ್ವಾಗತ ಸಮಿತಿಯವರು 10 ಸಾವಿರ ಜನಕ್ಕೆ ಊಟ ತಿಂಡಿ ಒದಗಿಸುತ್ತಿದ್ದಾರೆ. ಅಡಿಗೆ ಸಿಬ್ಬಂದಿ, ಸ್ವಯಂ ಸೇವಕ ದಳ ಬಹುವಾಗಿ ದುಡಿಯುತ್ತಿದೆ.

ಉತ್ಸವ

ನಿನ್ನೆ ಸಂಜೆ 6-30 ಕ್ಕೆ ಹೊರಟ ಮೆರವಣಿಗೆ ನಾಲ್ಕು ರಾಜವೀದಿ ಸುತ್ತಿ ಬರಲು ರಾತ್ರಿ 11 ಗಂಟೆಯಾಯಿತು. ಒಂದು ಜೊತೆ ಕಟ್ಟಿದ ಗಾಲಿ ವೇದಿಕೆ ಮೇಲೆ ಶ್ರೀ ರೆಡ್ಡಿ, ಶ್ರೀ ನಿಜಲಿಂಗಪ್ಪ ಕುರ್ಚಿಗಳ ಮೇಲೆ ಮಂಡಿಸಿದ್ದರು. ಆ ವೇದಿಕೆಯೆಲ್ಲಾ ಪುಷ್ಪಾಲಂಕಾರಗಳಿಂದ ಭರ್ತಿಯಾಗಿ ಹೋಗಿದೆ.

ಉಪನ್ಯಾಸ

ನಡುರಾತ್ರಿ 11 ರ ವೇಳೆಗೆ ಸಂತೆಮಾಳದಲ್ಲಿ ನೆರೆದಿದ್ದ 25 ಸಾವಿರ ಜನರ ಸಭೆಯಲ್ಲಿ ಶ್ರೀ ರೆಡ್ಡಿ, ನಿಜಲಿಂಗಪ್ಪನವರು ಸ್ವಲ್ಪವೇ ಕಾಲ ನಾಲ್ಕು ಸಂದೇಶ ನುಡಿ ಆಡಿದರು.

ಬಿಡಾರ

ಎಲ್ಲರಿಗೂ ಬಿಡಾರ ವ್ಯವಸ್ಥೆ ಅಚ್ಚುಕಟ್ಟಾಗಿದೆ

ಪತ್ರಿಕಾ ಬಿಡಾರಾಲಯದಲ್ಲಿ ಮೊಟ್ಟ ಮೊದಲು ಬಿಡಾರ ಪ್ರಾರಂಭಿಸಿದವರು ಸತ್ಯವಾದಿ ಪ್ರತಿನಿಧಿ.

ಧ್ವಜವಂದನೆ

ಈ ಬೆಳಿಗ್ಗೆ 8-30 ಗಂಟೆಗೆ ಆಗಬೇಕಾಗಿದ್ದ ಈ ಕಾರ್ಯ 10 ಗಂಟೆಗೆ ಆಯಿತು. ಶ್ರೀ ರೆಡ್ಡಿ ಮೈಸೂರು ಧ್ವಜವನ್ನೂ ಶ್ರೀ ನಿಜಲಿಂಗಪ್ಪ ರಾಷ್ಟ್ರಧ್ವಜವನ್ನೂ ಹಾರಿಸಿ ನಾಲ್ಕು ನಾಲ್ಕು ಹಿತವಚನಗಳನ್ನಿತ್ತರು. 15 ಸಾವಿರ ಮಂದಿ ಧ್ವಜಕ್ಕೆ ವಂದಿಸಿದರು.

ಅಲಂಕಾರ

ಅಧಿವೇಶನದ ಭಾರಿ ಚಪ್ಪರ ದಿವ್ಯಾಲಂಕೃತವಾಗಿದೆ. ರಾತ್ರಿ ಮೆರವಣಿಗೆ ಸಭೆಗಳಲ್ಲಿ ದೀಪಾಲಂಕಾರ ಭವ್ಯವಾಗಿತ್ತು.

ಬಿಸಿ

ಈಗ ಗಂಟೆ 3 ಆಯಿತು. ಸ್ವಾಗತಾಧ್ಯಕ್ಷರ ಭಾಷಣ ಮುಗಿದಿದೆ. ಅಧ್ಯಕ್ಷರ ಉಪನ್ಯಾಸ ನಿರ್ಣಯಗಳ ಮಂಡನೆ ನಡೆದಿದೆ. ಜನ ಅಧಿವೇಶನದ ಪೆಂಡಾಲನ್ನು ಇರುವೆ ಸಾಲಿನಂತೆ ಮುತ್ತಿಬಿಟ್ಟಿದೆ. ಅಧಿವೇಶನ ಅದ್ಭುತವಾಗಿ ಸಾಗುತ್ತಿದೆ.

ನಾಳೆ

ಇನ್ನು ಈ ಸಂಜೆ ಎಥಾ ಪ್ರಕಾರ ಮಾವಿನಾಲು ಬಹಿರಂಗ ಭಾಷಣಗಳು. ನಾಳೆ ಮತ್ತೆ ನಿರ್ಣಯಗಳು. ಊಟ ತಿಂಡಿ, ಉಪಚಾರ, ಉಪನ್ಯಾಸದ ಮೇಲೆ ಉಪನ್ಯಾಸ. ಸಭೆ, ಸಭಿಕರ ಅಮಿತ ಉತ್ಸಾಹ, ಇತ್ಯಾದಿ-ತಿಳಿದೇ ಇದೆ.

ಒಟ್ಟಿನಲ್ಲಿ

ಅಸಾಧ್ಯ ಪ್ರೇಕ್ಷಕ ವೃಂದ, ಪ್ರಯಾಣ ತಂಡ, ಸಭಿಕ ಸಮೂಹ ನೋಡಲು ಎರಡು ಕಣ್ಣು ಸಾಲದು.

ಹೈದರಾಬಾದ್

ಪ್ರಜೆಗಳ ಪ್ರಾಣದಮೇಲೆ ಜೂಜು !

ಹೈದರಾಬಾದಿನಲ್ಲಿ ಎಲ್ಲೆಲ್ಲಿಯೂ ಗೂಢಚಾರರೇ. ಎಲ್ಲೆಲ್ಲಿಯೂ ಮಿಲಿಟರಿ ನಿಯಂತ್ರಣ ಪರಿಪಾಲನೆಯೇ. ಬಂದು ಹೋಗಲಿರುವ ಸೌಕರ್ಯಗಳಿಲ್ಲವೂ ಮಿಲಿಟರಿ ಅವಶ್ಯಕತೆಗಳು ತೀರಿದ ನಂತರವೇ ಇತರರಿಗೆ ಪ್ರಯಾಣ ಸೌಕರ್ಯಗಳು. ಯಾವ ಬಗೆಯಲ್ಲಿ ಅನುಮಾನವು ಕಂಡು ಬಂದರೂ ನ್ಯಾಯಾನ್ಯಾಯ ವಿಚಾರಣೆಯ ಅಗತ್ಯವಿರುವುದಿಲ್ಲ. ಯಾವುದೋ ಟ್ರಂದು ಆರ್ಡಿನೆನ್ಸು ಪ್ರಯೋಗಿಸಲ್ಪಡುತ್ತದೆ. ಸಮಯವಲ್ಲದ ಸರಿ ಸಾತ್ರಿ ಸಮಯದಲ್ಲಿ ಕೂಡ ಗಾಢನಿದ್ರೆಯಲ್ಲಿರುವವರನ್ನು ಕೂಡ ಹೋಳಗಳಂತೆ ಎತ್ತಿಕೊಂಡು ಹೋಗಿ ಕತ್ತಲು ಕೋಣೆಗಳಲ್ಲಿ ತುಂಬುತ್ತಿರುವರು. ಕುರಿಗಳ ಮಂದೆಯು ಮೇಲೆ ಬೀಳುವ ಹೋಳಗಳ ಗುಂಪಿನಂತೆ ಗ್ರಾಮಗಳ ಮೇಲೆ ಮಿಲಿಟರಿ, ಪೋಲೀಸ್ ಮತ್ತು ಮತೋನ್ಮಾದರು ಧಾಳಿ ಮಾಡುತ್ತಿರುವರು. ನೈಜಾಮಿನ ಜನಗಳು ಅಂಗೈಯಲ್ಲಿ ಪ್ರಾಣಗಳನ್ನು ಹಿಡಿದುಕೊಂಡು ಜೀವಿಸುತ್ತಿರುವರು. ' ಲೆವಿ ' ಹೆಸರಿನಲ್ಲಿ ಗ್ರಾಮದಲ್ಲಿಯ ಜನರ ಧನ ಮಾನ ಪ್ರಾಣಗಳನ್ನು ಕೊಳ್ಳೆಹೊಡೆಯುತ್ತಿರುವರು. ನಿರ್ಬಂಧಿಸಲ್ಪಟ್ಟವರು ಆಹಾರ ಪಾನೀಯಗಳಿಲ್ಲದೆ ಉಪವಾಸವ್ರತವನ್ನಾಚರಿಸುತ್ತಿದ್ದಾರೆ. ನಿರಪರಾಧಿಗಳನ್ನು ಕೂಡ ನಿರ್ದಾಕ್ಷಿಣ್ಯವಾಗಿ ಬಂಧಿಸಿ ಸುಳ್ಳು ಕೇಸುಗಳನ್ನು ಹೊರಿಸಿ ಶಿಕ್ಷೆಗಳನ್ನು ವಿಧಿಸುತ್ತಿರುವರು.

ಮತೋನ್ಮಾದರು ಪ್ರಜಾಶಕ್ತಿಗೆ ವ್ಯತಿರಿಕ್ತವಾಗಿ ಮತದ ಹೆಸರಿನಲ್ಲಿ ಘಾತಕ ಚರ್ಯೆಗಳನ್ನು ನಡೆಸುತ್ತಿರುವರು. ನೈಜಾಂ ಇತ್ತೆಹಲ್ ಮುಸ್ಲಿಮೀನ್ ಪಾರ್ಟಿಯು ನೈಜಾಮು ಸರ್ಕಾರವನ್ನು ಕೀಲುಗೊಂಬೆ ಸರ್ಕಾರವಾಗಿ ಮಾಡಿ ಪ್ರಜೆಗಳ ಪ್ರಾಣಗಳೊಂದಿಗೆ ಜೂಜಾಡುತ್ತಿದೆ.

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟದ್ದು —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್, ಮೈಸೂರು

ಮುಖ್ಯ ವಾರ್ತೆಗಳು

ಆ ॥ ಕೃಪಾಲಿನಿಯವರು ಕಾಂಗ್ರೆಸ್ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಟ್ಟ ಪ್ರಯುಕ್ತ ಶ್ರೀ ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವುದಾಗಿ ತಿಳಿಯಬಂದಿದೆ

ಸಂಸ್ಥಾನದಲ್ಲಿ ಗೋಹತ್ಯೆ ನಿಲ್ಲಲಿಬಹುದಾದ ನಿರ್ಣಯವು ಬೆಂಗಳೂರು ಪೌರಸಭೆಯಲ್ಲಿ ಮಂಜೂರಾಯಿತು.

ಕಾಶ್ಮೀರದಲ್ಲಿ ಮಿ | ಜಿನ್ನ ಮತ್ತಿತರ ಲೀಗು ಮುಖಂಡರಿಗೆ ಆರಮನೆಗಳನ್ನು ಕಟ್ಟುವ ಯೋಜನೆ ಇದ್ದಿತೆಂದು ಅಲ್ಲೀ ಮಂತ್ರಿಗಳ ಹೇಳಿಕೆ

ಚಿತ್ರದುರ್ಗ ನ 16 — ಮೈಸೂರು ಕಾಂಗ್ರೆಸ್ಸಿಗೆ ಶ್ರೀ ಸಿದ್ದಲಿಂಗಯ್ಯನವರು ಅಧ್ಯಕ್ಷರಾಗಿ ಚುನಾಯಿತರಾದರು — ಸರಕಾರ-ಕಾಂಗ್ರೆಸ್ ಒಪ್ಪಂದ ಅಂಗೀಕಾರ ನಿರ್ಣಯ ಮಂಜೂರಾಯಿತು.

ಮೈಸೂರು....ರಾಜಧಾನಿಯ ಆಹಾರ ಪರಿಸ್ಥಿತಿ ಮತ್ತು ಅದನ್ನು ಉತ್ತಮಪಡಿಸಲು ವಿಧಾನ ಪರ್ಯಾಲೋಚನೆ ಬಗ್ಗೆ ತಾ || 21 ರ ಸಂಜೆ ಪೌರಸಭೆಯ ವಿಶೇಷ ಮೀಟಿಂಗು ಏರ್ಪಡಿಸಲಾಗಿದೆ.

ಮೈಸೂರು— ನವಜ್ಯೋತಿ ಸ್ಟೂಡಿಯೊ ಮಾಲೀಕರಾದ ಶ್ರೀ ಜಿ. ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಗೌ|| ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ಸಂಘದವರು ನಡೆಸಿದ ಶ್ರೀ ಧನ್ವಂತರಿ ಮತ್ತು ಹ || ಅಬುಅಲಿ ಸೀನ ಸಪ್ತಾಹದ ಮುಕ್ತಾಯ ಸಮಾರಂಭವು ತಾ || 16 ರಲ್ಲಿ ಯಶಸ್ವಿಯಾಗಿ ನೆರವೇರಿತು.

Woodlands

ಕಿಕ್ಕಿರಿದ ಜನಸಂದಣಿಯಿಂದ

ಕೂಡಿದ 3 ನೇ ವಾರ

ಅಶೋಕಕುಮಾರ್

ವೀರಾ, ಹ್ಯಾರೊ, ಪಾತ್ರವಹಿಸಿರುವ

ಶಿಕಾರಿ

(ಅವೋಳ ಹಿಂದಿ ಚಿತ್ರ)

ಪ್ರತಿದಿನ 3 ಆಟಗಳು

At Opera

THINGS TO COME

From 20–11–47

ಮೂಲಿತಿ — ಶಿವಭಾಗ್ಯಂ

ಎಸ್. ವಿ. ಸುಬ್ಬಯ್ಯ — ನಂಬಿಯಾರ್

ಪಾತ್ರವಹಿಸಿರುವ

ಕಂಜನ್

(ತಮಿಳು)

Edited, Printed and Published by M S Krishna Rao at the Satyavadi Press Chamaraja Agahar Mysore.

ಶಾ || 17-11-47 || ಶ್ರೀ || ನಂ. 62

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾಗಮತವಿಶಾರದ
ಸಂಘದ ಕಾರ್ಯದರ್ಶಿ. ದೂವರ್ಸಪುರಂ, ಶಿವಮೊಗ್ಗಾ ಜಿಲ್ಲಾ

ಹಿಂದೂ ಧರ್ಮಕ್ಕೆ ಗಂಡಾತರ

ಶ್ರೀ ಜಗದ್ಗುರುಗಳಿಂದ ಹೊಸವರ್ಷದ ಸಂದೇಶ

(ಸ್ವಂತ ಸುದ್ದಿಗಾರರಿಂದ ತಂತಿ)

ದೇವಗಡಬೇರಿಯಾ ಡಿ 14

ಸ್ವರಾಜ್ಯ ಸ್ವಹಸ್ತಪಾದನಂತರ ಸಂಭವಿಸಿರುವ ಈ ನವ ವರ್ಷ ವರಿಷ್ಠವಾಯವಾದದ್ದು — ಎಂದು ಶ್ರೀ ದ್ವಾರಕಾ ಶಾರದ ಪೀಠಾಧೀಶ ಶ್ರೀ ಶಂಕರಾಚಾರ್ಯ ಜಗದ್ಗುರುಗಳು ನಿನ್ನೆ ದಿವಸ ನೆರೆದಿದ್ದ ಪ್ರಚಂಡ ಸಭೆಯಲ್ಲಿ ನೂತನ ಸಂವತ್ಸರ ಆಶೀರ್ವಾದ ಸಂದೇಶವನ್ನು ಅಪ್ಪಣೆ ಕೊಡಿಸಿದರು ದೇವಗಡಬಾರಿಯ ಪ್ರಭುಗಳು ಕುಟುಂಬ ಸಮೇತ ಸಭೆಗೆ ಆಗಮಿಸಿದ್ದರು

" ನೀವು ಆಚರಿಸುವ ಸಮಾರಂಭ ಪ್ರಾಧಾನ್ಯಕ್ಕೆ ಪ್ರಧಾನವಾಗಿದೆ ಆದರೆ ನಿಜ ಸ್ವಾತಂತ್ರ್ಯ ಫಲ ಪಡೆಯಲು ಜನತೆಗೆ ಸಾಧ್ಯವಿಲ್ಲವಾಗಿದೆ ಇದೀಗ ಹಿಂದೂ ಧರ್ಮ ಸರ್ವಭಾಗಗಳಿಂದಲೂ ಗಂಡಾತರಕ್ಕೊಳಗಾಗಿದೆ ಎಲ್ಲೆಲ್ಲೂ ಅಶಾಂತಿಯೆದ್ದಿದೆ ಬಾರ್ಹಸ್ಪತ್ಯದಿಂದ ಪ್ರತಿಯೊಬ್ಬರೂ ದೂರವಿರಬೇಕು ಕ್ಷತ್ರಿಯ ರಾಜರುಗಳು ಸಂಘಟಿತರಾಗಬೇಕು ಐಕ್ಯಮಣಿವನ್ನು ಇಡ್ಡಗಟ್ಟಿ ಅಶಾಂತಿಯ ನಿರ್ಮೂಲಕ್ಕೆ ಸುಸಜ್ಜಿತರಾಗಬೇಕು ಹಿಂದೂ ಧರ್ಮ ವೆಂತು, ಹಿಂದೂ ಜನತೆಯ ಸಂರಕ್ಷಣೆಗೆ ಹಿಂದೂ ಜನಾಂಗ ಸಿದ್ಧವಾಗಬೇಕು ಭಗವಂತನು ಆಧ್ಯಾತ್ಮಿಕ ಶಕ್ತಿಯನ್ನು ಮತ್ತು ಕರುಣಾ ಹೃದಯವನ್ನು ದೇಶಕ್ಕೆ ಕರುಣಿಸಲಿ " ಎಂದು ಶ್ರೀ ಜಗದ್ಗುರುಗಳು ತಿಳಿಸಿದರು

ಶ್ರೀ ಜಗದ್ಗುರುಗಳಿಗೆ
ಭಾರಿ ಸ್ವಾಗತ

ದೇವಗಡಬೇರಿಯಾ ಡಿ 11 — ದೇವಗಡಬೇರಿಯಾದ ಶ್ರೀಮನ್ಮಹಾರಾಜರ ಆಹ್ವಾನದ ಮೇಲೆ ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಮೆಹಾರಾಜರವರು ಕಾಡಿಯಿಂದ ತಾ || 8 ನೇ ಶನಿವಾರ ಹೊರಟು ದೇವಗಡ ಬೇರಿಯಾಕ್ಕೆ 10 ನೇ ಸೋಮವಾರ ಸಂಜೆ ದಯಮಾಡಿಸಿದರು. ಸಂಸ್ಥಾನದಿಂದ ಮತ್ತು ಸಾರ್ವಜನಿಕರಿಂದ ಶ್ರೀ ಜಗದ್ಗುರುಗಳಿಗೆ ಅಭೂತಪೂರ್ವ ಸುಸ್ವಾಗತ ನೀಡಲಾಯಿತು ಬಿರುದು ಬಾವಲಿಗಳ ಸಮೇತ ನಗಂದಲ್ಲೆಲ್ಲ ಶ್ರೀ ಜಗದ್ಗುರುಗಳ ಮೆರವಣಿಗೆ ವೈಭವದಿಂದ ಜರುಗಿತು ಶ್ರೀಮನ್ಮಹಾರಾಜರವರು ಶ್ರೀಮನ್ಮಹಾರಾಣಿಯವರು ಮತ್ತು ರಾಜಮನೆತನದವರು ಶ್ರೀ ಜಗದ್ಗುರುಗಳವರ ಸಂದರ್ಶನ ಪಡೆದರು. ಶ್ರೀ ಜಗದ್ಗುರುಗಳು ಭಾರಿ ಸಭೆಯಲ್ಲಿ ಸ್ಫೂರ್ತಿದಾಯಕ ಭಾಷಣ ಮಾಡಿದರು ಪ್ರತಿದಿನವೂ ಸನಾತನ ಧರ್ಮದ ವಿಚಾರದಲ್ಲಿ ಶ್ರೀ ಜಗದ್ಗುರುಗಳು ಉಪನ್ಯಾಸ ಮಾಡುವರು ಶ್ರೀ ಜಗದ್ಗುರುಗಳ ಆಗಮನದಿಂದ ಸರ್ವರಿಗೂ ಅಪಾರ ತಾನಂದ ಉಂಟಾಗಿದೆ

Save the Cow

ಗೋ ವಧೆ ನಿಲ್ಲಲಿ

ಜಾತಿವ್ಯವಸ್ಥೆಯ ಭವಿಷ್ಯ

(ಆಚಾರ್ಯ ಪೀಠಾಧಿಪತಿ ಶ್ರೀ ರಾಘವಾಚಾರ್ಯ ಸ್ವಾಮಿಗಳು)

(ಮುಂದುವರಿದುದು)

ಆದರೆ ನಾವು ಇನ್ನೊಂದು ಕಡೆಯಲ್ಲಿ ಅನೇಕ ಜಾತಿಗಳು ಹಿಂದೂ ಸಮಾಜದಿಂದ ಹೊರಹೊರಟು ಸ್ವತಂತ್ರವಾಗಲಿಚ್ಚಿಸುವುದನ್ನೂ ಅಥವಾ ತಮ್ಮ ಇತಿಹಾಸವನ್ನು ಪುರೆತು ಬ್ರಾಹ್ಮಣ, ಕ್ಷತ್ರಿಯ ಅಥವಾ ವೈಶ್ಯರೆಂದು ಹೇಳಿಸಿಕೊಳ್ಳುವ ಅನಧಿಕಾರ ಚೇಷ್ಟೆಗಳನ್ನು ಮಾಡುವುದನ್ನೂ ನೋಡುವಾಗ ಹೃದಯಕ್ಕೆ ತುಂಬಾ ವೇದನೆಯಾಗುವುದು. ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ತಮ್ಮ ತಮ್ಮ ಸ್ಥಾನವಿದೆ. ಸ್ವರ್ಣಕಾರ, ಕಮ್ಮಾರ, ಬಡಗಿ, ಕ್ಷೌರಿಕ, ಕುಂಬಾರ ಮಡಿವಾಳ ಮುಂತಾದ ಜಾತಿಗಳಿಗೆ ಅವರವರ ಸ್ಥಾನವಿದೆ. ಅಂತ್ಯಜ ಜಾತಿಗಳಿಗೂ ಸ್ಥಾನವು ನಿಯಮಿತವಾಗಿದೆ. ಆದುದರಿಂದ ಹಿಂದು ವರ್ಣ ಅಥವಾ ಜಾತಿಯು ತನ್ನ ಸ್ಥಾನವನ್ನು ಬಿಟ್ಟು ಬೇರೆ ಸ್ಥಾನವನ್ನು ಗ್ರಹಣ ಮಾಡುವುದು ತನ್ನ ಪೂರ್ವಜರಿನ್ನು ಕಲಂಕಿತಗೊಳಿಸಿದಂತೆ ಸೃಷ್ಟಿಯ ಆರಂಭದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ – ಈ ನಾಲ್ಕು ವರ್ಣಗಳು ಪ್ರಕಟವಾದುವು. ಇವುಗಳ ಸವರ್ಣ ಸಂಬಂಧದಿಂದ ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಜಾತಿಗಳು ಉತ್ಪನ್ನವಾದುವು. ಪಕ್ಷಿಗಳೂ ಇದೆ — " ಸವರ್ಣೇಭ್ಯಃ ಸವರ್ಣಾಸು ಜಾಯಂತೇ ಹಿ ಸಜಾತಯಃ " ಅಂದರೆ ಸವರ್ಣ ಪತಿಪತ್ನಿಯರಿಂದ ಅದೇ ಜಾತಿಯು ಉತ್ಪನ್ನವಾಗುತ್ತದೆ. ಬ್ರಾಹ್ಮಣ ವರ್ಣದ ಪತಿಯಾಗಿ ಬ್ರಾಹ್ಮಣ ವರ್ಣದ ಸ್ತ್ರಿಯಾದರೆ, ಅವರಿಂದಾಗುವ ಸಂತಾನವು ಬ್ರಾಹ್ಮಣಜಾತಿಯೆನಿಸುವುದು. ಹೀಗೆಯೇ ಎಂದಿನಿಂದಲೂ ಹೇಳಿಸಿಕೊಳ್ಳುತ್ತಲೂ ಇವೆ. ಅಸವರ್ಣ ಸಂಬಂಧದಿಂದ ಅನ್ಯ ಪ್ರತಿಲೋಮ ಮತ್ತು ಅನುಲೋಮ ಜಾತಿಗಳು ಉತ್ಪನ್ನವಾದುವು. ತಮ್ಮ ಜಾತಿಗತ ಆಚಾರಗಳನ್ನು ತ್ಯಜಿಸುವವರಿಗೆ ದೇಶಭೇದದಿಂದ ಬೇರೆ ಬೇರೆ ಜಾತಿಗಳಾದವು. ಇತಿಹಾಸದಲ್ಲಿ ಈ ಸಮಸ್ತ ಜಾತಿಗಳ ಉತ್ಪತ್ತಿ, ಸ್ಥಿತಿ ಮುಂತಾದ ಎಲ್ಲಾ ವೃತ್ತಾಂತವೂ ಸುಸ್ಪಷ್ಟವಾಗಿದೆ ಅದನ್ನು ಅವಲೋಕನೆ ಮಾಡುವುದು ಉಚಿತವಲ್ಲ. ಈಯೆಲ್ಲಾ ಜಾತಿಗಳೂ ಸದಾಕಾಲದಿಂದ ಹಿಂದೂ ಸಮಾಜದ ಅಂಗವಾಗಿದ್ದುಕೊಂಡು ನಡೆದು ಬಂದಿವೆ ಅದೇ ಪ್ರಕಾರ ಅಂಗವಾಗಿರುವುದರಲ್ಲಿ ಯೇ ಅವರ ಜೀವನವಿದೆ. ಅನ್ಯಥಾ ಅವುಗಳ ಇರುವಿಕೆಯು ಬಾಳಲಾರದು ಮತ್ತು ಹಿಂದೂ ಸಮಾಜಕ್ಕೆ ಹಾನಿ ತಗಲುವುದು.

ಜಾತೀಯ ಸಂಸ್ಥೆಗಳಲ್ಲಿ ಇಂದೀಗ ತಮ್ಮ ತಮ್ಮ ಜಾತಿಯನ್ನು ಸ್ವತಂತ್ರ ಹಾಗೂ ಸ್ವಾವಲಂಬಿಯನ್ನಾಗಿ ಮಾಡುವ ಅದಾವ ಮಹತ್ವಾಕಾಂಕ್ಷೆಯು ಕಾಣಿಸುವುದೋ, ಅದಲ್ಲಿಯೂ ಹಿಂದೂ ಸಮಾಜಕ್ಕೆ ಹಿತವಿಲ್ಲ. ನಮ್ಮ ಧರ್ಮ ಶಾಸ್ತ್ರಕಾರರು ಸಮಸ್ತ ಹಿಂದೂಗಳೂ ಸೇರಿ ಸ್ವಾವಲಂಬಿಗಳಾಗಲು ಆಜ್ಞೆ ಮಾಡಿರುವರು. ಇದೇ ದೃಷ್ಟಿಯಿಂದ ಪ್ರತಿಯೊಂದು ಜಾತಿಯು ಅನುಪಾತವು ಮತ್ತು ಸ್ವಭಾವವನ್ನು ಪ್ರಕೃತಿದೇವಿಯು ನಿಶ್ಚಯಿಸಿದಳು ಮತ್ತು ಪ್ರತಿಯೊಂದು ಜಾತಿಯ ಕರ್ಮವನ್ನು ಋಷಿಗಳು ನಿರ್ಧರಿಸಿರುವರು. ಅನುಪಾತವು ನಷ್ಟವಾಗುವುದರಿಂದ ಸಂಘರ್ಷವೂ ಸ್ವಭಾವ ವಿರುದ್ಧವಾದ ಕರ್ಮ ಮಾಡಿದಲ್ಲಿ ಪತನವೂ ಅವಶ್ಯಂಭಾವಿಯಾದ ಕಾರಣ ಪ್ರತಿಯೊಂದು ಜಾತಿಯ ಪ್ರತಿಯೊಂದು ವ್ಯಕ್ತಿಯೂ ತನ್ನ ಜಾತಿಗತ ಧರ್ಮವನ್ನು ಪಾಲಿಸಬೇಕಾಗುವುದು. ಆದ್ದರಿಂದ ಬ್ರಾಹ್ಮಣ ಜಾತಿಗೆ ಬ್ರಾಹ್ಮಣ ಧರ್ಮದ ಅನುಷ್ಠಾನವು ಪರ್ಯಾಪ್ತವಾಗಿದೆ ಇದೇ ಪ್ರಕಾರ ಅನ್ಯ ಜಾತಿಗಳಿಗೆ ತಮ್ಮ ತಮ್ಮ ಧರ್ಮದ ಅನುಷ್ಠಾನವು ಪರ್ಯಾಪ್ತವಾಗಿದೆ. ಇದರ ಶಿಕ್ಷಣವಾಗಬೇಕು. ಜತೆಗೇ ಹಿಂದುಗಳು ಪ್ರತಿಯೊಂದು ಜಾತಿಗೆ ಅದರ ಅಧಿಕಾರವನ್ನು ಕೊಡುವುದೆಂದು ಪ್ರತಿಜ್ಞೆ ಮಾಡಿಕೊಳ್ಳಬೇಕು. ಉದಾಹರಣೆಗೆ – ಚರ್ಮಕಾರ ಜಾತಿಯ ಕರ್ತವ್ಯವು ತೊಗಲಿನ ಕಾರ್ಯ ಮಾಡುವುದು ಅಂದರೆ ಜೋಡುಗಳನ್ನು ತಯಾರಿಸುವುದು. ಅತನು ಮಾಡಿದ ಜೋಡುಗಳನ್ನೇ ಹಿಂದೂ ಸಮಾಜವು ಧರಿಸಬೇಕೆಂಬುದು ಆ ಜಾತಿಯ ಅಧಿಕಾರವಿದೆ. ಹಿಂದುಗಳು ಈ ನಿಯಮವನ್ನು ಒಪ್ಪಬೇಕಾಗಿದೆ ಈ ಪ್ರಕಾರ ಪ್ರತಿಯೊಂದು ಜಾತಿಯಲ್ಲಿ ಕರ್ತವ್ಯ ಮತ್ತು ಅಧಿಕಾರವು ಪ್ರತಿಷ್ಠೆಗೊಂಡಲ್ಲಿ ನಮ್ಮ ಸಮಾಜದಲ್ಲಿ ಸಂಘರ್ಷಕ್ಕೆ ಅವಕಾಶವೇ ಇರಲಾರದು ಮತ್ತು ವಿಶ್ವದ ಎಲ್ಲಾ ರಾಷ್ಟ್ರಗಳ ಸಮಕ್ಕೆ ನಮ್ಮ ಸಮಾಜವು ಸ್ವಾವಲಂಬಿಯೆಂದು ಸಿದ್ಧವಾಗುವುದು.

(ಸಶೇಷ)

ಗಾಂಧೀಜೀ

ಯವರನ್ನು ಕುರಿತು

ಒಂದೆರಡು ಮಾತು

.... 1 ....

ಗಾಂಧಿಯು ನಮ್ಮಂಥಾ ಮನುಷ್ಯನೇ. ನಮಗೂ ಆತನಿಗೂ ಬಾಹ್ಯದಲ್ಲಿ ಅಷ್ಟು, ಭೇದವಿಲ್ಲ. ಮುಖ್ಯವಾದ ಭೇದವೆಂದರೆ ಆತನು 'ನುಡಿದಂತೆ ನಡೆಯುತ್ತಾನೆ : ನಡೆಯುವಂತೆ ಬೋಧಿಸುತ್ತಾನೆ.

.... 2 ....

ಗಾಂಧೀಜೀ ಸ್ವಾತಂತ್ರ್ಯಾಭಿಪ್ರಾಯ ಉಳ್ಳವನು. ಶಾಸನೋಲ್ಲಂಘನ, ಸತ್ಯಾಗ್ರಹ, ಸಹಾಯ ನಿರಾಕರಣೆ, ಎಂಬ ನೂತನ ಅಸ್ತ್ರಗಳನ್ನು ರಾಜಕೀಯ ರಂಗದಲ್ಲಿ ಪ್ರವೇಶಗೊಳಿಸಿದವನು ಈತನು, ದೇಹಶಕ್ತಿಗಿಂತ, ಕಾಯುಕ್ಕಿಂತ ಆತ್ಮಬಲವೇ ಹೆಚ್ಚಿನದೆಂದು ನಂಬಿ, ನಂಬಿಸಿ, ರಾಜಕೀಯ, ಸಾಂಘಿಕ ರಂಗಗಳಲ್ಲಿ ಪ್ರವೇಶಗೊಳಿಸಿದ ಮಹಾತ್ಮನು ಗಾಂಧೀಜಿ-

.... 3 ....

ಸಂಘೆಸಂಸ್ಥರನು ಗಾಂಧೀಜಿ. ಅಸ್ಪೃಶ್ಯ ನಿವಾರಣೆ, ಹಿಂದೂಮುಸ್ಲಿಂ ಸಾಮರಸ್ಯಗಳೆಂಬ ಮಹತ್ತರ ಸಂಸ್ಕರಣಗಳನ್ನು ಸ್ಥಾಪಿಸಿದವನು ! ಈತನು ಅವು ಪೂರ್ತಿಯಾಗಿ ನೆಂವೇರಿದವೇ ಅಥವಾ ನೆರವೇರದವೇ ಎಂಬುದು ಬೇರೆ ಮಾತು. ಅದಕ್ಕೆ ಬಾಧ್ಯರು ನಾವೇ.

.... 4 ....

ನಿಜವಾಗಿ ನೋಡಿದಲ್ಲಿ ಎಲ್ಲಾ ಮತಿಗಳೂ ಸತ್ಯಾರ್ಜಿಗಳನ್ನೇ ಮಾಡಲಿಕ್ಕೆ ಹೇಳುತ್ತವೆ. ಹಿಂಸೆಯು ಕೂಡದೆಂದೂ, ನೆರೆಯವನನ್ನೂ ಶತ್ರುವನ್ನೂ ಪ್ರೇಮಿಸಬೇಕೆಂದೂ ಬೋಧಿಸುತ್ತದೆ. ಆದರೆ ದುರ್ದೈಷ್ಟವಶಾತ್ ಮತಸ್ಥರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರಾಗಲೀ ಮತವನ್ನು ಆಸು ಸರಿಸುವಂಥಾವರು ಪ್ರಪಂಚದಲ್ಲಿ ವಿರಳರಾಗಿದ್ದಾರೆ. ಅವರು ತಮ್ಮ ಹೀನ ಚರ್ಯೆಗಳಿಗೆ ಮತವನ್ನು ಆಧಾರವಾಗಿಟ್ಟುಕೊಳ್ಳುವಿಕೆಯೂ ಮತ್ತೊಷ್ಟು ಘೋರವಾದದ್ದು

.... 5 ....

ಗಾಂಧೀಜಿ ನಿಜವಾದ ಮತಾಸಾರಿಯು. ಇಂದು ಪ್ರಪಂಚದಲ್ಲಿಯ ಎಲ್ಲಾ ಮತಗಳ ತತ್ವಗಳನ್ನೂ ಅರ್ಥಮಾಡಿಕೊಂಡು ಶಕ್ತಿಯನುಸಾರವಾಗಿ ಆಚರಿಸಲು ಪ್ರಯತ್ನಿಸುವವನು ಯಾವನಾದರೂ ಇರುವನೆಂದಲ್ಲಿ ಅವನು ಗಾಂಧೀಜೀ ಮಾತ್ರವೇ.

.... 6 ....

ಭಾರತೀಯ ಮಹಾಪುರುಷರುಲ್ಲಿ, ಪ್ರಪಂಚದ ಪ್ರಮುಖರಲ್ಲಿ, ಗಾಂಧೀಜಿಯೊಬ್ಬನು ಗಾಂಧೀಜಿಯಂಥಾ ಸಂಸ್ಕೃತಾತ್ಮರು ಕಾಲವಾಹಿನಿಯಲ್ಲಿ ಅಪರೂಪವಾಗಿ ಉದಯಿಸುತ್ತಿರುತ್ತಾರೆ.

.... 7 ....

ರಾಟೆಯ ನಾದವು ಯಂತ್ರಗಳ ಧ್ವನಿಗಿಂತ ಶಾಸ್ತ್ರೀಯವಾದದ್ದೆಂದು ಸಾಂದರವನು ಗಾಂಧಿ. ಪ್ರಪಂಚವನ್ನೇ ಧ್ವಂಸ ಮಾಡಲು ಶಕ್ತಿಯುಳ್ಳ ಅಟಂ ಬಾಂಬು ಅಹಿಂಸೆಯ ಮುಂದೆ ಬಾಲವಾಡಿಸಲಾರದೆಂದು ಹೇಳುವಂಥವನು ಗಾಂಧಿ. ಆತ್ಮಶಕ್ತಿಯು ಎಲ್ಲಾ ಬಾಹ್ಯ ಶಕ್ತಿಗಳಿಗಿಂತ ಮಿಗಿಲಾದುದೆಂದು ನಿರೂಪಿಸಿದವನು ಗಾಂಧಿ.

ಇಂಥಾ ಗಾಂಧಿಯು ಚಿರಂಜೀವಿಯಾಗಿ ಬಾಳಲಿ ಎಂದು ಎಲ್ಲರೂ ಹಾರೈಸೋಣ. ಮತ್ತು ಸ್ವತಂತ್ರ ಭಾರತದಲ್ಲಿ ಗೋವಧೆ ನಿಲ್ಲಿಸಲು ಗಾಂಧೀಜೀ ಪ್ರಯತ್ನಿಸಲೆಂದು ಕೋರುತ್ತೇವೆ.

ಶ್ರೀ ವಿಜಯನಗರದ ಮಹಾರಾಜರ ಸಂಸ್ಕೃತ ಕಳಾ ಶಾಲೆಯ ವಿದ್ಯಾರ್ಥಿಗಳು ಊಟ ಮಾಡುತ್ತಿದ್ದ ಆ ಮಹಾರಾಜರ ಛತ್ರದಲ್ಲಿ ಸರ್ವ ವರ್ಣ ಸಹ ಪಂಕ್ತಿ ಭೋಜನವು ನಿರ್ಬಂಧ ಮಾಡಲ್ಪಟ್ಟಿದೆ.

ಗಾಂಧೀಜೀ ತಾವೇ ನೂತ ದಾರದಿಂದ ಮೇಜುಒಟ್ಟಿ ನೇಯಿಸಿ ಬ್ರಟೀಷ ರಾಜಕುಮಾರಿಗೆ ಕಳಿಸಿದ್ದಾರೆ

ಮುರಗೋಡು ಶ್ರೀ ಸ್ವಾಮಿ ಬಾಪೂ ದೀಕ್ಷಿತರು ಒಂದು ವಾರದವರೆಗೆ ನಿಡಾಹಾರವಿಲ್ಲದೇ ಒಂದೇ ಆಸನದಲ್ಲಿ ಕುಳಿತು ಭಜನಾ ಸಪ್ತಾಹ ನಡೆಸುತ್ತಾರೆಂದೂ, ಹೀಗೆ ಎಷ್ಟೋ ಕಡೆ ನಡೆಸಿರುವರೆಂದೂ, ಈ ತಾ || 8 ರಿಂದ ಶಿವಮೊಗ್ಗಾದಲ್ಲಿ ನಡೆಯುತ್ತಿರುವದೆಂದೂ ತಿಳಿಯಬಂದಿದೆ.

ಲಾವಣಿ ಪದಗಳನ್ನು ಹಾಡುತ್ತಾ ಹಳ್ಳಿಗಳಿಗೆ ಸಂಚರಿಸಿ 'ಗ್ರೋ ಮೋರ್ ಫುಡ್' ದ ಪ್ರಚಾರ ಕುರಿತು ಮುಂಬಯಿ ಶೇತ್ಕಿ ಖಾತೆಯವರು ಶ್ರೀ ಬಾಳಪ್ಪನವರಿಗೆ ಒಂದು ಲಾವಣಿಕಾರನನ್ನು ಮುಂಬಯಿ ಸರ್ಕಾರ ನೇಮಿಸಿದೆ

ವಿವಿಧ ವರ್ತಮಾನ

ಬ್ರಿಟಿಷ್ ಕಾಳಸಂತೆಯಲ್ಲಿ ನಿಜಾಂ ಸೇನಾಪತಿ ಜ || ಎಡ್ರೂಸ್ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಂಡು ಹೈದರಾಬಾದಿಗೆ ಕಳಿಸಿದ್ದಾರೆ. ಚಲನೆಯುಳ್ಳ ಕಾರ್ಖಾನೆಯೊಂದು ಹೈದರಾಬಾದಿಗೆ ತಲುಪಿದೆಯೆಂದು ಸುದ್ದಿ.

ಂ ಂ

ಪಾಕೀಸ್ತಾನ ಪ್ರಭುತ್ವ ಫಿರೋಜ್ ಖಾನ್ ನೂನ್ ರನ್ನು ಮಧ್ಯಪೂರ್ವಕ್ಕೆ ವಿಶೇಷ ನಿಯೋಗ ಕಳಿಸಿರುವ ವಿಷಯು ಈಗ ಗೊತ್ತಾಗಿದೆ ಟರ್ಕಿ ಮುಂತಾದ ಮುಸ್ಲಿಂ ರಾಷ್ಟ್ರಗಳಿಂದ ಅಧಿಕ ಶಸ್ತ್ರಾಸ್ತ್ರಗಳನ್ನು ಪಡೆಯುವ ಸಲುವಾಗಿಯೇ ಈ ನಿಯೋಗವೆಂದು ದೆಹಲಿಯಲ್ಲಿ ಹೇಳಲಾಗಿದೆ.

ಂ ಂ

ಜುನಗಡದಿಂದ ಕೂಡಲೇ ಭಾರತ ಸೇನೆ ವಾಪಸ್ಸಾಗಬೇಕು : ಜುನಗಡ ರಾಜನಾಗಲೀ, ಮಂತ್ರಿಯಾಗಲಿ ಸಂಧಾನ ನಡೆಸಲಾರರು — ಎಂದು ಭಾರತ ಸರ್ಕಾರಕ್ಕೆ ಪಾಕೀಸ್ತಾನ ಸರ್ಕಾರ ಪ್ರತಿಭಟನೆಯನ್ನು ಸೂಚಿಸಿದೆ

ಂ ಂ

ಹೈದರಾಬಾದು ಸಂಸ್ಥಾನದ ಬಳಿಯ ಜಿಲ್ಲೆಗಳಲ್ಲಿರುವ ಮುಸ್ಲಿಂ ಅಧಿಕಾರಿಗಳನ್ನು ದೂರಕ್ಕೆ ವರ್ಗಾಯಿಸಿರಿ — ಇಲ್ಲದಿದ್ದರೆ ಅಪಾಯವಿದೆ ಎಂಬುದಾಗಿ ಆಂಧ್ರ ಹಿಂದಿ ಮಹಾಸಭೆಯವರು ಮುದರಾಸು ಸರ್ಕಾರವನ್ನು ಕೇಳಿಕೊಂಡಿರುವರು

ಂ ಂ

ಹೈದರಾಬಾದಿಗೆ ಜುನಘಡಕ್ಕಾದ ಗತಿಯೇ ಬರಬಹುದೆಂದು ಸರ್ದಾರ ಪಟೇಲರು ಎಚ್ಚರಿಕೆ ಇತ್ತಿದ್ದಾರೆ.

ಂ ಂ

ಮೈಸೂರು ಸಂಸ್ಥಾನದಲ್ಲಿ ಸರಕಾರದ ಅಪ್ಪಣೆಯಿಲ್ಲದೆ ಯಾರೂ ಮೋಟಾರುಗಳನ್ನು ಮಾರಕೂಡದೆಂದು ಸರಕಾರದ ಆಜ್ಞೆಯಾಗಿದೆ.

ಂ ಂ

ಹೈದರಾಬಾದಿನಿಂದ ಬೆಜವಾಡಾಕ್ಕೆ 6 ಸಾವಿರ ನಿರಾಶ್ರಿತರು ಬಂದಿರುವರು.

ಂ ಂ

ಬೆಂಗಳೂರಿನ ಹಿಂದೂ ಸ್ಥಾನೀ ವೆಪೂನ ಕಾರ್ಖಾನೆಯು ರಾಷ್ಟ್ರೀಯವಾಗಿ ಮಾಡಲ್ಪಡಬಹುದೆಂದು ಹೇಳಲಾಗಿದೆ.

ಂ ಂ

ಜುನಗಡ ವಿಷಯು ಪಾಕಿಸ್ತಾನಕ್ಕೆ ಸಂಬಂಧವಿಲ್ಲವೆಂದೂ, ಅದನ್ನು ಬಿಟ್ಟಿ ಕೊಡಲಾಗುವುದಿಲ್ಲವೆಂದೂ ಸರದಾರ ಪಟೇಲರ ಸಿಂಹನಾದ.

ಂ ಂ

ಗೋವಾ ಬಲದರು ನೈಜದಮರಿಗೆ ಮಾರಲ್ಪಡುವುದಿಲ್ಲವೆಂದು ಹೇಳಲಾಗಿದೆ.

ಆದರ್ಶ ಪ್ರಧಾನಿ ನೆಹರು

'ಅಧಿಕಾರವೆಂಬುವದು ಒಂದು ಮಾದಕ ಪದಾರ್ಥಕ್ಕೆ ಸಮವಾದದ್ದು. ಅಧಿಕಾರ ಸ್ಥಾನದಲ್ಲಿರುವ ವ್ಯಕ್ತಿಯು ಹೆಂಡವನ್ನು ಕುಡಿದವನಂತೆ ವರ್ತಿಸುತ್ತಾನೆ' ಎಂಬುದು ಸರ್ವಸಾಮಾನ್ಯದಲ್ಲಿ ಕಾಣಬರಬಹುದಾಗಲೀ, ಭಾರತ ಪ್ರಧಾನಿ ಶ್ರೀ ನೆಹರೂರವರು ಪ್ರಜೆಗಳೊಂದಿಗೆ ಕಲೆತುನುಲೆತು ಇರುತ್ತಾರೆ. ಪ್ರಜೆಗಳು ಅವರನ್ನು ಸುಲಭವಾಗಿ ಕಾಣಲು ಅವಕಾಶವಿರುತ್ತದೆ. ಈ ಬಗೆಯಲ್ಲಿ ನಿಗರ್ವಿಗಳಾಗಿ ಜೀವಿಸುವವರು ಅತಿ ವಿರಳವೆನ್ನಬಹುದು ನೆಹ್ರೂರವರ ಸದ್ಗುಣಗಳನ್ನು ವ್ಯಕ್ತಪಡಿಸಲು ಅನೇಕ ಸಂಘಟನೆಗಳು ಒದಗಿದೆ. ಅವುಗಳಲ್ಲಿ ಕೆಲವನ್ನು ವಾಚಕರ ಅವಗಾಹನೆಗೆ ಇದರಡಿ ಕೊಡಲಾಗಿದೆ.

ದೆಹಲಿಯಲ್ಲಿ ಪಂಡಿತರ ಮನೆಯು ಪಂಜಾಬಿನಿಂದ ಬಂದ ನಿರಾಶ್ರಿತರಿಂದ ತುಂಬಿಹೋಗಿತ್ತು, ಪ್ರಾತಃಕಾಲ ಆಫೀಸಿಗೆ ಹೋಗುವಾಗ ಒಂದು ಬಾರಿ, ಮಧ್ಯಾಹ್ನ ಭೋಜನಾನಂತರ ಇನ್ನೊಂದು ಬಾರಿ ಅವರಿಗೆ ಭೇಟಿ ಇತ್ತು, ಅವರ ಹೃದಯವಿದ್ರಾವಕ ಕಥನೆಗಳನ್ನು ಬೇಸರಗೊಳ್ಳದೆ ಕೇಳಿ, ಹೊರಟುಹೋಗುತ್ತಿದ್ದರು. ಹಗಲೆಲ್ಲಾ ರಾಜಕೀಯ ವ್ಯವಹಾರಗಳನ್ನೆಲ್ಲವನ್ನೂ ಮುಗಿಸಿಕೊಂಡು ರಾತ್ರಿ ಆಯಾಸದೊಂದಿಗೆ ಮನೆಗೆ ಬರುವ ವೇಳೆಗೆ ಮತ್ತೊಂದು ಗುಂಪಿನವರು ಇವರನ್ನು ಕಂಡು ಮಾತನಾಡಲು ಸಿದ್ಧರಾಗಿರುತ್ತಿದ್ದರು. ಆಯಾಸದಿಂದಿದ್ದರೂ ನೆಹ್ರೂಜೀಯವರು ಸ್ವಲ್ಪವೂ ಬೇಸರಗೊಳ್ಳದೆ ಅವರ ವೇದನಾಪೂರ್ವಕ ಸಂಘಟನೆಗಳನ್ನು ಶ್ರದ್ಧೆಯೊಡನೆ ಕೇಳಿ ಅವರನ್ನು ಸಮಾಧಾನಗೊಳಿಸುತ್ತಿದ್ದರು.

ಈಚೆಗೆ ಕಾಶ್ಮೀರ ಸಂಬಾಧದಲ್ಲಿ ನೆಹರೂರವರು ನಡೆಸಿದ ವಿಚಾರಗಳು ಎಲ್ಲರಿಗೂ ತಿಳಿದೇ ಇದೆ.

ಗೂಂಡಾಗಳನ್ನು ಹಿಡಿದು ಪೋಲೀಸರಿಗೆ ಕೊಟ್ಟುದೂ, ಕ್ಯೂನಲ್ಲಿ ಅವರಿಗೆ ರೇಷ್ ಸಿಕ್ಕದಿದ್ದಾಗ ಮಾಡಿದವಿಚಾರವೂ ಚರಿತಾರ್ಥವಾಗಿದೆ.

ಸೈಕಂಕ್ರ ಭಾರತದ ಪ್ರಭಾನಿಯು ನಮ್ಮಂದೆ ಒರುವ ಪ್ರಧಾನಿಗಳಿಗೆ ಮಾರ್ಗದರ್ಶಿಯಾಯಿ, ಆದರ್ಶ ಪ್ರಧಾನಿಯಾಗಿಯೂ ಇರುವುದು ಸಮೆಲ್ಲರ ಸುಕೃತವಲ್ಲದೆ ಮತ್ತೇನು ?

ನೆಹರು ಚಿರಕಾಲ ಬಾಳಲಿ.

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತ್ತದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು

ಸತ್ಯವಾದಿ

ಶಕ್ತಿಸುದಾ

ಸೋಮವಾರದ ಸಂಚಿಕೆ ಮಾತ್ರ

ವಾರ್ಷಿಕಚಂದಾ

ರಷ್ಯಳಕ್ಕೆ ಅಂಚೆವೆಚ್ಚ ಸೇರಿ 1--12--0

ಶಕ್ತಿಹೀನತೆಗೆ ಸಂಜೀವನ

ಮೈಸೂರು ಸಿಟಿ ರೇಷನಿಂಗ್ ಆಫೀಸ್

ನಂ. ಸಿ ಇ ಡಿ 259 / 47-48 ತಾ|| 7-11-1947

ನೋಟೀಸು

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಸುಮಾರು 89893 ಹಳೇ ಮತ್ತು ಅನುಪಯುಕ್ತವಾದ ಗೋಣೀಚೀಲಗಳು ನಗರದ ಕೆಲವು ಸಂಕಾರಿ ಗೋಡ್ವೌನ್‌ಗಳಲ್ಲಿ ಶೇಖರವಾಗಿವೆ. ಅವುಗಳನ್ನು ತಾ|| 8—12—47 ರಿಂದ ಈ ಕೆಳಗೆ ಕಂಡ ಷರತ್ತುಗಳ ಮೇಲೆ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

1 ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರೆಲ್ಲರೂ ರೂ. 50 ಠೇವಣಿ ಇಡಬೇಕು. ಹರಾಜು ಮುಗಿದನಂತರ ಈ ಠೇವಣಿ ವಾಪಸ್ಮಾಡಲಾಗುವುದು.

2 ಹರಾಜಿನಲ್ಲಿ ಕೊನೆಯ ಬಿಡ್ ಮಾಡಿದವರು ಹರಾಜು ಮುಗಿದ ಕೂಡಲೇ ಬಿಕರಿ ಹಣದಲ್ಲಿ ಶೇಕಡಾ 25 ರಷ್ಟು ಹಣವನ್ನು ಅಲ್ಲೇ ಠೇವಣಿ ಇಡಬೇಕು. ಮತ್ತು ಉಳಿದ ಹಣವನ್ನು ಬಿಕರಿಯು ನಿಶ್ಚಯವಾದ್ದವನ್ನು ಅವರಿಗೆ ತಿಳಿಸಿದ ಮೂರು ದಿನಗಳಲ್ಲಿ ಸಲ್ಲಿಸತಕ್ಕದ್ದು. ಹಾಗೆ ಮಾಡದಿದ್ದಲ್ಲಿ ಠೇವಣಿ ಇಟ್ಟ ಹಣವನ್ನು ಸರ್ಕಾರವು ಜಪ್ತುಮಾಡಿಕೊಂಡು ಚೀಲಗಳನ್ನು ಮತ್ತೆ ಮೂರಾಟ ಮಾಡಲಾದೀತು. ಇದರ ಜವಾಬ್ದಾರಿಯು ಠೇವಣಿದಾರರ ಮೇಲೆ ಇದ್ದು ಇದರಲ್ಲಿ ಸರಕಾರಕ್ಕೆ ನಷ್ಟವಾಗುವುದಾದರೆ ಅದರ ಜವಾಬ್ದಾರಿಯೂ ಇವರ ಮೇಲೆ ಇರುವುದು. ಲಾಭವಾದರೆ ಇವರಿಗೆ ಅದರಲ್ಲಿ ಭಾಗವಿರಲಾರದು.

3 ನಗರದ ರೇಷನಿಂಗ್ ಆಫೀಸರ್ ಕಡೆಯಿಂದಾಗಲಿ ಅಥವಾ ಅವರ ಅಸಿಸ್ಟೆಂಟರ ಕಡೆಯಿಂದಾಗಲಿ ಹರಾಜಿನ ಕಾರ್ಯರೂಪಗಳು ನಡೆಯುವವು. ಮತ್ತು ಇದರ ಕೊನೆ ತೀರ್ಮಾನವನ್ನು ಬೆಂಗಳೂರಿನಲ್ಲಿರುವ ಮೈಸೂರು ಫುಡ್ ಸಪ್ಲೈಸ್ ಡೈರೆಕ್ಟರವರಿಂದ ಮಾಡಲಾಗುವುದು. ಇವರಿಗೆ ಹರಾಜು ಒಪ್ಪುವ ಅಥವಾ ಬಿಡುವ ಅಧಿಕಾರವೂ ಉಂಟು ಅದಕ್ಕೆ ಕಾರಣವನ್ನು ಕೇಳುವ ಅಧಿಕಾರವು ಯಾರಿಗೂ ಇರಲಾರದು. ಒಂದು ವೇಳೆ ಹರಾಜು ಒಪ್ಪಿತವಾಗದಿದ್ದಲ್ಲಿ ಬಿಡ್ಡರಿಗೆ ಯಾವ ಪ್ರತಿಫಲವೂ ದೊರೆಯಲಾರದು

4 ಮೇಲೆ 1 ನೇ ಕಲಮಿನಲ್ಲಿ ನಮೂದಿಸಿರುವ ಷರತ್ತಿಗನುಗುಣವಾಗಿ ಕೊನೆಯ ಬಿಡ್ಡರು ಹರಾಜಿನ ಪೂರ್ಣ ಹಣವನ್ನು ಸಲ್ಲಿಸಿದ ನಂತರವೇ ಮಾಲು ತೆಗೆದುಗೊಂಡು ಹೋಗಲು ಅರ್ಹನಾಗುವನು.

5 ಬಿಡ್ಡರುಗಳು ಕೆಲಸದ ದಿನಗಳಲ್ಲಿ ಸಾಯಂಕಾಲ 3 ರಿಂದ 5 ಘಂಟೆ ವರೆಗೆ ಆಯಾ ಡಿವೋಗಳಲ್ಲಿ ಚೀಲಗಳನ್ನು ನೋಡಬಹುದು

6 ಹರಾಜು ಮುಗಿದಿದ್ದನ್ನು ಹೇಳಿದನಂತರ ಖರೀದಿ ಮಾಡಿದವರು 3 ದಿನಗಳಲ್ಲಿ ಪೂರ್ತಾ ಹಣ ಸಲ್ಲಿಸಿ ಸಾಮಾನು ಸುಘರ್ದಿ ಪಡೆಯಬೇಕು ತಪ್ಪಿದಲ್ಲಿ ಆಗಬಹುದಾದ ಯಾವ ನಷ್ಟಗಳಿಗೂ ಈ ಕಛೇರಿ ಜವಾಬ್ದಾರಿಯಾಗಲಾರದು.

7 ಮೂರಾಟವಾದ ಈ ಚೀಲಗಳ ಸ್ಥಿತಿಗತಿಗಳ ಬಗ್ಗೆಯೂ, ಮತ್ತಾವ ವಿಷಯಕ್ಕೂ ಸರ್ಕಾರವು ಜವಾಬ್ದಾರವಲ್ಲ.

(ಸಹಿ) ಎಂ. ಶ್ರೀನಿವಾಸಲು ನಾಯ್ಡು

ರೇಷನಿಂಗ್ ಆಫೀಸರ್, ಮೈಸೂರು ಸಿಟಿ

SHAKTI SUDHA

A Superb TONIC